ಮೆಟ್ರೋ ಕಾಮಗಾರಿ ವಿಳಂಬದ ಬಗ್ಗೆ

172 (481) ಶ್ರೀ ಎಂ.ಕೃಷ್ಣಪ್ಪ (ವಿಜಯನಗರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಯನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕಡೆ ಮೆಟ್ರೋ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ;

ಆ) ಈ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣವೇನು;

ಇ) ಇದರಿಂದಾಗಿ ಸಂಚಾರ ದಟ್ಟಣೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಕಿರಿಕಿರಿಯನ್ನು ತಪ್ಪಿಸಲು ಕೈಗೊಂಡ ಕ್ರಮಗಳೇನು;

ಈ) ಎಷ್ಟು ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ವಿಜಯನಗರ ಕ್ಷೇತ್ರ ವ್ಯಾಪ್ತಿಯಲ್ಲಿ ಮೆಟ್ರೊ ಕಾಮಗಾರಿಯು ಗಾಯಿತ್ರಿ ಫ್ಲೋರ್ ಮಿಲ್ (ಶಂಕರಪ್ಪ ಗಾರ್ಡನ್) ನಿಂದ ಮಾಗಡಿ ರಸ್ತೆ (ಮಾಗಡಿ ರಸ್ತೆ ಮೆಟ್ರೋ ನಿಲ್ದಾಣ)ದವರೆಗೆ ಪ್ರಗತಿಯಲ್ಲಿದೆ. ಈ ಕಾಮಗಾರಿ ರೀಚ್–2 (ಕುಷ್ಠರೋಗ ಆಸ್ಪತ್ರೆಯಿಂದ ನಾಯಂಡಳ್ಳಿಯವರೆಗೆ ಒಟ್ಟು 5.90 ಕಿ.ಮೀ)ನ ಒಂದು ಭಾಗವಾಗಿದೆ.

ಆ) ಮೆಟ್ರೋ ಕಾಮಗಾರಿಯು ಇಲ್ಲಿ ಸ್ವಲ್ಪ ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳು:

- ಭೂಮಿಯ ಕೆಳಗಿರುವ ಹಲವಾರು utility ಗಳ ಬಗ್ಗೆ ದಾಖಲೆ/ಮಾಹಿತಿ ಇಲ್ಲ. ಭೂಮಿಯನ್ನು ಅಗೆದಾಗ, ಅವುಗಳನ್ನು ಕಂಡಾಗ, ಅವುಗಳನ್ನು ಸ್ಥಳಾಂತರಿಸ ಬೇಕಾಗುತ್ತದೆ. ಇದರಿಂದ ವಿಳಂಬವಾಗುತ್ತಿದೆ.
- ಭೂ ಸ್ವಾಧೀನಾ ಹಾಗೂ ಸ್ವತ್ತು ಸ್ವಾಧೀನ ಪ್ರಕ್ರಿಯೆಯಲ್ಲಿ ಅಡಚಣೆಗಳು.

ಇ) ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ:

- ಮೆಟ್ರೋ ಕಾಮಗಾರಿ ನಡೆಯುವ ಹಲವಾರು ಕಡೆ ರಸ್ತೆಯನ್ನು ಅಗಲೀಕರಿಸಲಾಗಿದೆ. ದೀಪಾಂಜಲಿ ನಗರ ದವರೆಗೆ ತಡೆಗಟ್ಟುಗಳನ್ನು (Barricading) ನಿಲ್ಲಿಸಿ ಇಕ್ಕೆಲಗಳಲ್ಲಿ ವಾಹನಗಳು ಒಂದು ಲೇನ್‌ನಲ್ಲಿ ಸಾಗುವಂತೆ ಹಾಗೂ ಮೈಸೂರು ರಸ್ತೆಯಲ್ಲಿ ವಾಹನಗಳು 2 ಲೇನ್‌ಗಳಲ್ಲಿ ಸಾಗುವಂತೆ ವ್ಯವಸ್ಥೆ ಮಾಡಲಾಗಿದೆ.
- ವಾಹನಗಳ ಸಂಚಾರಕ್ಕೆ ಅನುಕೂಲವಾಗುವಂತೆ ರಸ್ತೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ.
- ವಾಹನ ಸಂಚಾರವನ್ನು ಸರ್ವಿಸ್ ರಸ್ತೆ ಕಡೆಗೆ ತಿರುಗಿಸಿದ ಸಂದರ್ಭಗಳಲ್ಲಿ ವಾಹನಗಳು ಸುಗಮವಾಗಿ ಸಾಗಲು ಸರ್ವಿಸ್ ರಸ್ತೆಗಳನ್ನು ದುರಸ್ತಿಮಾಡಿ ಬಲಪಡಿಸಲಾಗುತ್ತಿದೆ.
- ಪಾದಚಾರಿ ಸಂಚಾರವನ್ನು ಸುಗಮಗೊಳಿಸುವುದಕ್ಕಾಗಿ ಹೊಸದಾಗಿ ಫುಟ್‌ಪಾತ್‌ನ್ನು ವಿಜಯನಗರದಿಂದ ದೀಪಾಂಜಲಿನಗರದವರೆಗೆ ನಿರ್ಮಿಸಲಾಗುತ್ತಿದೆ ಮತ್ತು ಈ ಮಾರ್ಗದಲ್ಲಿ ದುರಸ್ತಿಯಲ್ಲಿದ್ದ ಪಾದಚಾರಿ ಮಾರ್ಗವನ್ನು ಸುಭದ್ರಸ್ಥಿತಿಗೆ ತರಲು ಕಾಮಗಾರಿ ಕೈಗೊಳ್ಳಲಾಗುತ್ತಿದೆ.

ಈ) ರೀಚ್–2ರ ಕಾಮಗಾರಿಯನ್ನು (ಕುಷ್ಠರೋಗ ಆಸ್ಪತ್ರೆಯಿಂದ ನಾಯಂಡನಹಳ್ಳಿಯವರೆಗೆ) ಸೆಪ್ಟೆಂಬರ್ 2012 ರಲ್ಲಿ ಪೂರ್ಣಗೊಳಿಸಲು ಗುರಿಹೊಂದಲಾಗಿದೆ.

ನಗರ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ

173 (474) ಶ್ರೀ ಎಂ.ಟಿ.ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಹಳೆ ಸಿ.ಎಂ.ಸಿ. ಹಾಗೂ 110 ಗ್ರಾಮಗಳಿಗೆ 01.01.2008 ರಿಂದ 20.02.2010 ರವರೆಗೆ ಬೆಂಗಳೂರು ನಗರದ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳೇನು; ಇದಕ್ಕೆ ಖರ್ಚು